# IN THE COURT OF THE ADDL. SENIOR CIVIL JUDGE & JMFC., GUBBI
# OS – **56/2023**

Witness present and duly sworn on : 01.08.2024.

Further cross Examination: by Counsel for Defendant :

ಸರ್ವೆ ನಂ.7 ರಿಂದ 21 ಆಗಿದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ. ಈ ದಾವೆಯನ್ನು ಸರ್ವೆ ನಂ.21 ಕ್ಕೆ ಸಲ್ಲಿಸಿದ್ದೇನೆ. ನಾನು ಸರ್ವೆ ನಂ.21 ರ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಅಬ್ದುಲ್ ರೆಹೆಮಾನ್ ಸಾಬ್ ರವರು ಗುರುಚನ್ನಬಸಪ್ಪರವರಿಂದ ಖರೀದಿ ಮಾಡಿದ ಕ್ರಯಪತ್ರವನ್ನು ಹಾಜರುಪಡಿಸಿದ್ದೇನೆ. ಗುರುಚನ್ನಬಸಪ್ಪನವರಿಗೆ ಮಾರಾಟ ಮಾಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಸರ್ಕಾರಿ ಜಮೀನು ಆಗಿದ್ದು, ಅದು ಗುರುಚನ್ನಬಸಪ್ಪನವರಿಗೆ ಮಂಜೂರು ಆಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಸ್ತಿಯು ಗುರುಚನ್ನಬಸಪ್ಪನವರಿಗೆ ಮಂಜೂರು ಆಗಿತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ. ಸದರಿ ಆಸ್ತಿ ಸರ್ವೆ ನಂ.7 ರಲ್ಲಿ ಗುರುಚನ್ನಬಸಪ್ಪನವರು ಯಾವತ್ತಿಗೂ ಸ್ವಾಧೀನ ಇರಲಿಲ್ಲ ಆದ ಕಾರಣ ಅವರು ಅಬ್ದುಲ್ ರೆಹೆಮಾನ್ ರವರಿಗೆ ಯಾವುದೇ ದಾಖಲೆ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.7 ಅಥವಾ 21 ರಲ್ಲಿ ಅಬ್ದುಲ್ ರೆಹೆಮಾನ್ ರವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.21 ರ ದಾಖಲೆಗಳನ್ನು ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ಸೃಷ್ಟಿಸಿದ್ದೇನೆಂದರೆ ಸರಿಯಲ್ಲ.

ಪಂಚಾಯಿತಿ ಪಾರಿಕತ್ತ ವಿಭಾಗವನ್ನು ನಾನು, ಶಿವಾನಂದಯ್ಯ, ಲಿಂಗರಾಜು ಮತ್ತು ರೇಣುಕಯ್ಯನವರು ಮಾಡಿಕೊಂಡಿದ್ದಾರೆ. ಸದರಿ ಪಾರಿಕತ್ತನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಅಂತಹ ಯಾವುದೇ ಪಾರಿಕತ್ತು ದಾಖಲೆಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.21 ರಲ್ಲಿ ಖಾತೆ ಪಹಣಿ ಮಾಡಿಕೊಳಳಲು ನಾನು ಮತ್ತು ನನ್ನ ಅಣ್ಣ ತಮ್ಮಂ ದಿರು ಸುಳ್ಳು ಪಾರಿಕತ್ತು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಸರ್ವೆ ನಂ.21 ಸಂಭಂದಪಟ್ಟಂತೆ ಗುರುಚನ್ನಬಸಪ್ಪ ಮತ್ತು ಅಬ್ದುಲ್ ರೆಹೆಮಾನ್ ರವರ

ಹೆಸರಿನಲ್ಲಿ ಖಾತೆ ಪಹಣಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಬೇರೆಯವರ ಹೆಸರಿನಲ್ಲಿದ್ದ ಆಸ್ತಿಯನ್ನು ಸರ್ವೆ ನಂ.21 ಗೆ ಸಂಭಂದಿಸಿದ ಸುಳ್ಳು ಕಂದಾಯ ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಪ್ರತಿವಾದಿ ರಾಮಚಂದ್ರಯ್ಯನವರು ಸರ್ವೆ ನಂ.20 ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ಅಸ್ತಿಯು ಸರ್ವೆ ನಂ.20 ಸರ್ಕಾರಿ ಜಮೀನು ಎಂದರೆ ಸರಿ. ಸರ್ಕಾರಿ ಜಮೀನಿನಲ್ಲಿ ಪ್ರತಿವಾದಿಯು ಸ್ವಾಧೀನದಲ್ಲಿ ಇರುವ ಕಾರಣ ಅವರು ಆಸ್ತಿಯನ್ನು ಮಂಜೂರು ಮಾಡಲು ಲ್ಯಾಂಡ್ ಗ್ರ್ಯಾಂಟ್ ಕಮೀಟಿ, ಗುಬ್ಬಿ ರವರ ಮುಂದೆ ಅರ್ಜಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ಸರ್ವೆ ನಂ.20 ರಲ್ಲಿ ಅಕ್ರಮವಾಗಿ 2 ಎಕರೆ ಜಮೀನಿನಲ್ಲಿ ಇದ್ದು, ಅದರ ಚಕ್ಕುಬಂದಿ ಪೂರ್ವಕ್ಕೆ ಸೊಮಣ್ಣ, ನಾಗಣ್ಣ, ಕುಮಾರಣ್, ಪಶ್ಚಿಮಕ್ಕೆ ಸಿದ್ದರಾಮಯ್ಯನವರ ಜಮೀನು, ಉತ್ತರಕ್ಕೆ ದೊಡ್ಡಯ್ಯನವರ ಜಮೀನು, ದಕ್ಷಿಣಕ್ಕೆ ಹನುಮಂತರಾಜುರವರ ಜಮೀನು ಎಂದರೆ ಸರಿಯಲ್ಲ. ನನಗೆ, ನನ್ನ ಅಣ್ಣ ತಮ್ಮಂದಿರು ಮತ್ತು ಪ್ರತಿವಾದಿಯ ತಂದೆ ಹನುಮಂತಯ್ಯನವರ ನಡುವೆ ಮುಂಚೆಯಿಂದಲೂ ದಾವೆ ನಡೆಯುತ್ತಿದೆ ಎಂದರೆ ಸರಿ. ಶಿವಾನಂದಯ್ಯನವರು ಹಾಕಿದ್ದ ದಾವೆಯಲ್ಲಿ ಅವರಿಗೆ ಯಾವುದೇ ಉಪಯೋಗ ಆಗಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ ಕಾರಣ ಅವರು ನನ್ನ ಮೂಲಕ ಪ್ರತಿವಾದಿಯ ವಿರುದ್ದ ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಸ್ವಾಧೀನ ಇಲ್ಲದೆ ಇದ್ದರು ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi